ಹೋಯಿತು. ಗೃಹಿಣಿಯಾದ ಮಮತೆಯ ತಾಯಿಯಾದ ಅಮ್ಮ ಅಧ್ಯಾಪಕಿಯಾಗಬೇಕಾಯಿತು. ಅಣ್ಣ ಅವನನ್ನು ಪೋಷಕನಂತೆ ನೋಡತೊಡಗಿದ. ಅಕ್ಕ ಮನೆಯ ಜವಾಬ್ದಾರಿ ಹೊತ್ತುಕೊಂಡು ಎಲ್ಲರನ್ನೂ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಳು. ಆದರೆ ಅದು ಎಷ್ಟು ದಿವಸ– ಬೆಳೆದ, ಮದುವೆಗೆ ಬಂದ ಮಗಳನ್ನು ಬಿಟ್ಟು ಹೊರಗೆ ಕೆಲಸಕ್ಕೆ ಹೋಗುವುದು ಅಮ್ಮನಿಗೆ ಸರಿ ಎನಿಸಲಿಲ್ಲ. ಒಳ್ಳೆಯ ಸಂಬಂಧ ನೋಡಿ ಅವಳ ಮದುವೆ ಮಾಡಿದಳು. ಅಕ್ಕ ಮದುವೆಯಾಗಿ ಹೋದ ಮೇಲೆ ಮನೆಯ ಸಂತೋಷವೇ ಹೊರಟು ಹೋದಂತೆನಿಸಿತು. ಮತ್ತೆ ಕೆಲವು ವರ್ಷಗಳ ಅನಂತರ ಅಣ್ಣನ ಮದುವೆಯೂ ಗೊತ್ತಾಯಿತು. ಅತ್ತಿಗೆ ಬರುತ್ತಾಳೆ ಮತ್ತೆ ಮನೆಯಲ್ಲಿ ಮೊದಲಿನ ಸಂತೋಷ ತಿರುಗಿ ಬರುವುದೆಂದು ದೀಪಕನಿಗೆ ಖುಷಿಯಾಯಿತು. ಆದರೆ ಅತ್ತಿಗೆ ಏನೋ ಬಂದಳು. ಅವನೆಂದುಕೊಂಡಂತೆ ಆ ಭಾಗ್ಯ ಮಾತ್ರ ಅವನಿಗೆ ಸಿಗಲಿಲ್ಲ. ಅತ್ತಿಗೆ ಎಂದೂ ಅವರವಳಾಗಲಿಲ್ಲ. ಅಣ್ಣನೇ ದೂರವಾಗತೊಡಗಿದ. ಅವರ ಜಗತ್ತೇ ಬದಲಾಯಿತು. ಇಷ್ಟು ದಿನ ಮನೆಯ ಜವಾಬ್ದಾರಿ, ನೌಕರಿಯಿಂದ ದೂರವಾಗಿದ್ದ ಅಮ್ಮ ಹತ್ತಿರವಾದಳು. ಆಮೇಲೆ ಮತ್ತೊಂದು ಪರ್ವ ಶುರುವಾಯಿತು. ಇಷ್ಟು ದಿನಗಳ ನಂತರ ಮನೆಯ ಅಂಗಳದಲ್ಲಿ ಎರಡು ಸುಂದರ ಹೂವುಗಳು ಅರಳಿದವು. ಮನೆಯಲ್ಲಿ ಸಂತೋಷ ತುಂಬಿತು. ಆ ಬಾಲಕರಿಂದಾಗಿ ದೀಪಕನಿಗೆ ತನ್ನ ಬಾಲ್ಯವೇ ಮರಳಿ ಬಂದಂತೆನಿಸಿತು. ಮಕ್ಕಳು ಖುಷಿಯನ್ನೇನೋ ತಂದರು, ಆದರೆ ಜೊತೆಗೆ ಸಮಸ್ಯೆಯೂ ಬಂತು. ಅತ್ತಿಗೆಗೆ ಮಕ್ಕಳನ್ನು ನೋಡಿಕೊಂಡು ಕೆಲಸಕ್ಕೆ ಹೋಗುವುದು ಕಷ್ಟವಾಗುತ್ತಿತ್ತು. ಎಲ್ಲರೂ ಸೇರಿ ಅಮ್ಮನೇ ಕೆಲಸ ಬಿಟ್ಟು ಮಕ್ಕಳನ್ನು ನೋಡಿಕೊಳ್ಳಬೇಕೆಂದು ನಿರ್ಣಯಿಸಿದರು. ಅಮ್ಮನದು ಖಾಸಗಿ ಶಾಲೆಯ ಅಧ್ಯಾಪಕಿಯ ಕೆಲಸವಾಗಿತ್ತು. ಅಪ್ಪನ ಪೆನ್ಷನ್ ಹಾಗೂ ಅಮ್ಮನ ಸಂಬಳದಿಂದ ಹೇಗೋ ಮನೆ ನಡೆಯುತ್ತಿತ್ತು. ಈಗ ಅದರ ಅವಶ್ಯಕತೆ ಇರಲಿಲ್ಲ. ಅಣ್ಣ ಅತ್ತಿಗೆಯರ ಹೇಳಿಕೆಯಂತೆ ಅಮ್ಮ ರಾಜೀನಾಮೆ ಕೊಟ್ಟರು. ಆದರೆ ಅದೇ ಅವರು ಮಾಡಿದ ದೊಡ್ಡತಪ್ಪಾಯಿತು. ಅವರಿಗೆ ಹೊರ ಜಗತ್ತಿನ ಸಂಪರ್ಕವೇ ಇಲ್ಲದಂತಾಯಿತು. ಅವರ ಕೆಲಸವೇನೂ ಅಂಥ ಭಾರೀ ಸಂಬಳದ್ದಾಗಿರಲಿಲ್ಲ. ಆದರೆ ಅದರಿಂದಾಗಿ ಅವರಿಗೊಂದು ಗೌರವವಿತ್ತು. ಈಗ ಮನೆಯ ಯಜಮಾನಿಕೆ ಅತ್ತಿಗೆಯ ಕೈಗೆ ಬಂತು. ಅಮ್ಮ ಒಬ್ಬ ಆಯಾಳ ಸ್ಥಾನದಲ್ಲಿರಬೇಕಾಯಿತು. ಅದನ್ನು ನೋಡಿ ದೀಪಕ ಮನಸ್ಸಿನಲ್ಲೇ ಚಡಪಡಿಸತೊಡಗಿದ. ಆದಷ್ಟು ಬೇಗ ತನ್ನ ಕಾಲ ಮೇಲೆ ನಿಂತು ಅಮ್ಮನನ್ನು ಈ ಬಂಧನದಿಂದ ಬಿಡುಗಡೆ ಮಾಡಬೇಕೆಂದು ಯೋಚಿಸಿದ.

★★★

ದೀಪಕ್ ಬೇಗ ಎದ್ದು ಕಾಲೇಜಿಗೆ ಹೋಗುವ ತಯಾರಿಯಲ್ಲಿದ್ದ ಆಗ ಚಿಕ್ಕಪ್ಪ ಬಂದು 'ನಿನ್ನ ಚಿಕ್ಕಮ್ಮ ಕರೆಯುತ್ತಿದ್ದಾಳೆ, ಹೋಗಿ ಯಾಕೆಂದು ಕೇಳು' ಎಂದರು. ಒಳಗೆ ಹೋಗಿ ನೋಡುತ್ತಾನೆ ಚಿಕ್ಕಮ್ಮ ದೀಪಾವಳಿಗಾಗಿ ಮಾಡಿದ ತಿಂಡಿಗಳಿಂದ ತುಂಬಿದ ತಟ್ಟೆ ಹಿಡಿದು ನಿಂತಿದ್ದಾರೆ. 'ತಗೋ ದೀಪೂ, ಹೇಗೋ ಕಷ್ಟಪಟ್ಟು ಈ ತಿಂಡಿಗಳನ್ನು ನಿನಗಾಗಿ ಮುಚ್ಚಿಟ್ಟಿದ್ದೆ, ಇಲ್ಲದೇ ಹೋದರೆ ನಿನ್ನ ಚಿಕ್ಕಪ್ಪನ ಸ್ನೇಹಿತರಿಂದಾಗಿ ಮನೆಯಲ್ಲಿ ಏನೂ ಉಳಿಯುವುದಿಲ್ಲ.' ಕೇಳಿ ದೀಪಕನಿಗೆ ತುಂಬ ಸಂಕೋಚವಾಯಿತು. 'ಇವರು ನನ್ನ ಮೇಲೆ ಅದೆಷ್ಟು ಪ್ರೀತಿ ಇಟ್ಟುಕೊಂಡಿದ್ದಾರೆ! ನಾನು ಮಾತ್ರ ಹಬ್ಬಕ್ಕೆಂದು ಊರಿಗೆ ಹೋದವನು ಏನೂ ತರದೇ ಬರಿಗೈಯಲ್ಲಿ ಬಂದಿದ್ದೇನೆ. ಇವರೇನೆಂದು ಕೊಳ್ಳುವರೆಂದು ಅತ್ತಿಗೆ ಯೋಚಿಸಬೇಡವೇ– ಕಳೆದ ವರ್ಷವೂ ಹೀಗೇ ಬರಿಗೈಯಲ್ಲಿ ಬಂದಿದ್ದೆ. ಆಗ ಹಾಸ್ಟೆಲಿನ ಸ್ನೇಹಿತರು ತರಾಟೆಗೆ ತೆಗೆದುಕೊಂಡಿದ್ದರು. ಉಪಾಯವಿಲ್ಲದೇ ದುಃಖದ ನಟನೆ ಮಾಡುತ್ತ ಎಂದೋ ಸ್ವರ್ಗಸ್ಥರಾಗಿದ್ದ ಅಜ್ಜಿಯನ್ನು ಮತ್ತೆ ಸ್ವರ್ಗಕ್ಕೆ ಕಳಿಸಿದ್ದೆ. ಇವರೊಡನೆ ಹಾಗೆಲ್ಲ ಸುಳ್ಳು ಹೇಳಲು ಸಾಧ್ಯವೇ? ಮೈದುನ ಊರಿಗೆ ಹೋಗುವನೆಂದು ಅತ್ತಿಗೆ ಹಲ್ವಾ ಮಾಡುವುದಂತೂ ದೂರದ ಮಾತು, ಹೊರಡುವಾಗ ಬಾಯಿ ಸಿಹಿ ಮಾಡಿ